ತನ್ನ ಮಗ ಇದೇ ಕೋಣೆಯಲ್ಲಿ ಇದ್ದನೆಂಬುದು ರಾತ್ರಿಯಿಂದ ಮನಸ್ಸನ್ನು ಕಲಕುತ್ತಿದೆ. ಕೋಣೆಗೆ ಬಂದೊಡನೆ ಅತ್ತು ಮನಸ್ಸಿನ ಭಾರ ಹೊರಹಾಕಬೇಕೆಂದುಕೊಂಡಳು. ಅಳು ಹೆಪ್ಪುಗಟ್ಟಿ ಎದೆ ಭಾರವಾಗತೊಡಗಿತು.

''ದೊಡ್ಡಮ್ಮಾ... ಒಳಗೆ ಯಾರನ್ನೂ ಬಿಡುವುದಿಲ್ಲ. ಅವರ ಕಡೆ ಒಬ್ಬರನ್ನು, ನಿನ್ನನ್ನು ಮತ್ತು ಈ ಇಬ್ಬರನ್ನು ಮಾತ್ರ ಕರೆಯುತ್ತಾರೆ. ಅವರ ಕಡೆ ತಾಯಿ ಬಂದಿದ್ದಾಳೆ. ಜಡ್ಜ್ ನಿನ್ನನ್ನು ಎರಡೇ ಎರಡು ಮಾತು ಕೇಳುತ್ತಾರೆ...'' ಹೇಳುವುದನ್ನು ನಿಲ್ಲಿಸಿ ಸಾವಿತ್ರಿಯತ್ತ ನೋಡಿದ ಚಂದ್ರು. ಆಕೆ ಕದಲದಿರುವುದನ್ನು ನೋಡಿ ನಿದ್ದೆ ಮಾಡಿರಬಹುದೆಂದುಕೊಂಡು ತಾನೂ ಕಣ್ಣು ಮುಚ್ಚಿದ. ನೀರು ತುಂಬಿದ ಕಣ್ಣುಗಳಿಂದ ಸಾವಿತ್ರಿ ಟಾರ್ಪಾಲಿನ್‌ನಿಂದ ಕಟ್ಟಿದ್ದ ಮೇಲ್ಛಾವಣಿಯತ್ತಲೇ ನೋಡುತ್ತಿದ್ದಾಳೆ.

'ನಾನು ಅಪ್ಪನ ಬಳಿ ಅಕ್ಷರ ಓದುವುದನ್ನು ಕಲಿತುಕೊಂಡೆ. ಗಂಡನಿಂದ ಸಮಾಜವನ್ನು ನೋಡುವ ರೀತಿ ಅರ್ಥಮಾಡಿಕೊಂಡೆ. ಮಗನಿಂದ ಜೀವನದ ಈಜಾಟ ಕಲಿತೆ. ನಾನು ಮಕ್ಕಳು, ಗಂಡನೊಂದಿಗೆ ಒಂದು ಸಾಧಾರಣ ಜೀವನ ನಡೆಸಬೇಕೆಂದು ಬಯಸಿದ್ದೆ. ಆ ಎಚ್ಚರಿಕೆಯಿಂದಲೇ ಎಲ್ಲ ಕಷ್ಟಗಳನ್ನು ತಂದುಕೊಂಡೆ. ಜನ ತಂದೆಯನ್ನು ಹೊಗಳಿದಾಗ ಹೆಮ್ಮೆಯಿಂದ ಬೀಗಿದೆ. ಗಂಡನನ್ನು ಹೊಗಳಿದಾಗ ಭಯಪಟ್ಟೆ. ಮಗನನ್ನು ಹೊಗಳಿದಾಗ ಎಚ್ಚರ ವಹಿಸಿದೆ. ಆದರೂ ನಡೆಯುವುದು ನಡೆದೇಬಿಟ್ಟಿತು. ಈ ಮೂರು ತಲೆಮಾರಿನಿಂದ ನನ್ನನ್ನು ಹಿಂಬಾಲಿಸಿ ನೋಯಿಸಿದ್ದು ಯಾರು? ನನ್ನ ಕುಟುಂಬವನ್ನು ಊರಿನಿಂದ ದೂರ ಮಾಡಿದ್ದು ಯಾರು?...' ತನ್ನಲ್ಲಿ ತಾನೇ ತರ್ಕ ಮಾಡಿಕೊಳ್ಳುತ್ತಿದ್ದಾಳೆ ಸಾವಿತ್ರಿ.

ಗೋಡೆಗಳಂತೆ ನಿಲ್ಲಿಸಿ ಫಿಟ್ ಮಾಡಲಾಗಿದ್ದ ಕಬ್ಬಿಣದ ರೇಕುಗಳನ್ನು ಯಾರೋ ಕರಕರ ಕೆರೆದ ಶಬ್ದ. ಯಾವುದೋ ಯೋಚನೆಯಲ್ಲಿ ಮುಳುಗಿದ್ದ ಸಾವಿತ್ರಿ ಒಮ್ಮೆಗೇ ಅದರಿಂದ ಹೊರಬಂದಳು. ಆಚೆಯಿಂದ ಯಾರೋ ಬಲವಂತವಾಗಿ ರೇಕುಗಳನ್ನು ತಳ್ಳುತ್ತಿರುವಂತಿದೆ.

ಭಯದಿಂದ ಚಂದ್ರುವನ್ನು ಎಬ್ಬಿಸಬೇಕೆಂದುಕೊಂಡಳು. ತಾನೇ ಎಚ್ಚರಗೊಂಡ ಚಂದ್ರು, ''ಅವು ಹಾಗೇ ದೊಡ್ಡಮ್ಮ... ಮರಳುಗಾಡಿನ ಇಲಿಗಳು... ಹಲ್ಲಿಗಳು... ಹೆಗ್ಗಣಗಳಂತಿರುತ್ತವೆ. ಗುಂಪು ಗುಂಪಾಗಿ ಓಡಾಡುತ್ತವೆ'' ಎಂದ. ಸಾವಿತ್ರಿ ಗಾಬರಿಯಿಂದ ಹೌದಾ ಎನ್ನುವಂತೆ ನೋಡಿದಳು.

''ಅವು ಮಾತ್ರ ಅಲ್ಲ ದೊಡ್ಡಮ್ಮ... ಬೇರೆ ಬೇರೆ ಜಾತಿಯ ಹುಳು ಹುಪ್ಪಟೆಗಳು... ಪ್ರಾಣಿಗಳು ಓಡಾಡುತ್ತವೆ. ರಾತ್ರಿಹೊತ್ತೇ ಅವುಗಳ ಸಂಚಾರ. ಅದಲ್ಲದೆ ಈ ಕ್ಯಾಂಪ್ ಊರಿಗೆ ದೂರವಾಗಿ ಮರಳುಗಾಡಿನಲ್ಲಿದೆ. ಯಾವ ಪ್ರಾಣಿ ಸೋಕಿದರೂ ಕಷ್ಟ. ಆಸ್ಪತ್ರೆಗೆ ಹೋಗುವಷ್ಟರಲ್ಲಿ ಪ್ರಾಣವೇ ಹೋಗಿರುತ್ತದೆ. ನಾವಿಲ್ಲಿ, ಅವು ಗೋಡೆಯಾಚೆ. ರಾತ್ರಿಯಿಡೀ ಸಾವುಬದುಕಿನ ಹೋರಾಟವೇ.'' ವಿಷಾದದಿಂದ ಹೇಳಿದ ಚಂದ್ರು.

ಸಾವಿತ್ರಿಯ ಎದೆ ಭಾರವಾಯಿತು. 'ಮಕ್ಕಳೇ... ದೇಶವಲ್ಲದ ದೇಶದ ಮರಳುಗಾಡಿನ ರಾಜ್ಯದಲ್ಲಿ ಹೇಗಿದ್ದೀರಿ. ನಿಮ್ಮ ಕಷ್ಟ ಸುಮ್ಮನೆ ಅಲ್ಲ. ನಿಮ್ಮನ್ನು ಈ ಗತಿಗೆ ತಂದವರಿಗೆ ತಪ್ಪದೆ ಶಾಪ ತಗಲುತ್ತದೆ' ನೋವಿನಿಂದ ಮನಸ್ಸಿನಲ್ಲಿ ಅಂದುಕೊಂಡಳು.

ನಂತರ, 'ಊರಿನಲ್ಲಿರುವ ನನ್ನ ಬದುಕೂ ಅಷ್ಟೇ ಅಲ್ಲವಾ. ಇಲ್ಲಿ ಶತ್ರು ಯಾರು ಎಂಬುದಾದರೂ ಕಾಣಿಸುತ್ತದೆ. ನನಗೆ ಆ ನೆರಳು ಕೂಡ ಕಾಣಿಸಲಿಲ್ಲ.' ಎಂದುಕೊಂಡಳು.

ಹೊರಗೆ ಗಾಳಿ, ಗಾಳಿಗೆ ಎದ್ದ ಮರಳಿನ ಶಬ್ದ. ಎದ್ದ ಮರಳು ಕಬ್ಬಿಣದ ರೇಕುಗಳಿಗೆ ತಾಕಿದ ಶಬ್ದ. ನಡುವೆ ಪ್ರಾಣಿಗಳ ಅರಚುವ, ಗೋಡೆಗಳನ್ನು ಕೆರೆಯುವ, ಚಾವಣಿ ಹಾಸಿನ ಮೇಲೆ ಎಗರಿದ ಶಬ್ದ. ಆ ಶಬ್ದಗಳು, ವಾತಾವರಣ ನೋಡುತ್ತಿದ್ದರೆ ತನ್ನ ಜೀವನ ಕಾಣುತ್ತಿದೆ. ಇಷ್ಟು ಭಯಂಕರ ವಾತಾವರಣದಲ್ಲಿ ತನ್ನ ಮಗ ಹೇಗೆ ತಡೆದುಕೊಂಡಿದ್ದನೋ ಯೋಚಿಸುತ್ತಿದ್ದರೆ ಮತ್ತಷ್ಟು